
# ಕೃತಿ ಪ್ರೀತಿ

ಪುಸ್ತಕವೊಂದನ್ನು ಬರೆದು ಪ್ರಕಟಿಸಿದ ಬಳಿಕ ಲೇಖಕನೊಬ್ಬನ ಕೆಲಸ ಮುಗಿದ ಹಾಗೆ. ಪ್ರಕಟಣೆಯ ನಂತರ ಹಿನ್ನೆಲೆಯಲ್ಲಿ ಉಳಿಯುವುದು ಎಲ್ಲ ಉತ್ತಮ ಲೇಖಕರು ಅನುಸರಿಸುವ ಸಾಮಾನ್ಯ ವಿಧಾನ. ನಮ್ಮ ನವೋದಯ, ನವ್ಯದ ಬಹುಪಾಲು ಸಾಹಿತಿಗಳು ಹಾಗಿದ್ದರು. ಬರೆದ ತರುವಾಯ ಓದಿನ ಆಯ್ಕೆಯನ್ನು ಜನರಿಗೆ ಬಿಡುವ ಜಗದ ರೂಢಿಗತ ನಿಯಮದಲ್ಲಿ ಅವರಿಗೆ ನಂಬಿಕೆ ಇದ್ದಿತು. ಅಂತಹ ಲೇಖಕರ ಓದು, ವಿಮರ್ಶೆ ತನ್ನ ಪಾಡಿಗೆ ತಾನು ನಡೆಯುತ್ತಲೇ ಇರುತ್ತಿತ್ತು. ನಮ್ಮ ಹಿಂದಣ ಲೇಖಕರು ಹೆತ್ತವರಿಗೆ ಹೆಗ್ಗಣ ಮುದ್ದು ಎಂಬಂತೆ ತಮ್ಮ ಕೃತಿಗಳನ್ನು ನೋಡುತ್ತಿರಲಿಲ್ಲ. ಹಾಗಾಗಿ ಅವರು ತಮ್ಮ ಕೃತಿಗಳಿಂದ ಸಾಧ್ಯವಾದಷ್ಟು ಬೇಗ ಮುಕ್ತರಾಗುತ್ತಿದ್ದರು.

ಈಗಿನ ಅನೇಕ ಲೇಖಕರು ಪ್ರಕಟವಾದ ಬಹುಕಾಲದ ಬಳಿಕವೂ ತಮ್ಮ ಕೃತಿಗಳಿಂದ ತಾವೂ ಮುಕ್ತರಾಗುವುದಿಲ್ಲ, ಓದುಗರಿಗೂ ಮುಕ್ತಿಯನ್ನು ದಯಪಾಲಿಸುವುದಿಲ್ಲ. ಈಚಿನ ದಿನಗಳಲ್ಲಿ ಮರೆತೇನೆಂದರೂ ಮರೆಯಲಿ ಹ್ಯಾಂಗ ಎಂಬಂತೆ ಅನೇಕರ ಪುಸ್ತಕಗಳು, ಅವುಗಳ ಕುರಿತ ಅಭಿಪ್ರಾಯಗಳು, ತಮ್ಮ ಪುಸ್ತಕದ ಬಗ್ಗೆ ತಾವೇ ಮಾತನಾಡಿದ ವಿಡಿಯೊಗಳು ಈಗಿನ ದೃಶ್ಯ ಜಗತ್ತಿನಲ್ಲಿ ಆಗಾಗ ಕಣ್ಣಿಗೆ ಬೀಳುತ್ತಲೇ ಇರುತ್ತವೆ. ಹಾಗೆ ತಮ್ಮ ಹೆಸರನ್ನು ಚಲಾವಣೆಯಲ್ಲಿಡಲು ಕೆಲವು ಲೇಖಕರು ಸದಾ ಪ್ರಯತ್ನಶೀಲರಾಗಿರುತ್ತಾರೆ. ತಮ್ಮ ಕೃತಿರತ್ನಗಳ ಬಗ್ಗೆ ಅವರಿಗೆ ತೀರದ ವ್ಯಾಮೋಹ. ಅವರ ಪುಸ್ತಕ ಸಂಬಂಧಿ ವಿವರಗಳು ವಾಟ್ಸ್‌ಆ್ಯಪ್ ಗುಂಪುಗಳಲ್ಲಿ, ಫೇಸ್‌ಬುಕ್ ಪುಟದಲ್ಲಿ ಮತ್ತೆಮತ್ತೆ ಕಾಣಿಸುತ್ತಲೇ ಇರುತ್ತವೆ. ತಮ್ಮ ಪುಸ್ತಕದ ಬಗ್ಗೆ ಮಾಡಿಸುವ ವಿಮರ್ಶೆಯ ಸಂಕಲನ, ನಡೆಸುವ ಸಂವಾದ ಕಾರ್ಯಕ್ರಮಗಳು, ಹಲವು ಊರುಗಳಲ್ಲಿ ಮಾಡುವ ಒಂದೇ ಪುಸ್ತಕದ ಬಿಡುಗಡೆ ಸಮಾರಂಭಗಳು ಇದರ ಬೇರೆಬೇರೆ ರೂಪಗಳೇ. ಲೇಖಕರ ಈ ಸ್ವಕೇಂದ್ರಿತ ಚಟುವಟಿಕೆಗಳು ತಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ಕಲ್ಪಿಸುವ ಪಾಲಕರ ಕಾಳಜಿಯಂತೆ ಕಾಣುವುದರಿಂದ ಓದುಗರ ಸಹಾನುಭೂತಿಗೆ, ನಿರ್ಲಕ್ಷ್ಯಕ್ಕೆ ಅರ್ಹವಾಗಿವೆ.



ಕಲೆ: ವಾಗೀಶ ಹೆಗಡೆ

ಜನರ ಕಣ್ಣಿಗೆ, ಕಿವಿಗೆ ಒತ್ತಾಯದಿಂದ ಹಾಕುವ ಪ್ರಚಾರದಿಂದ, ಆನ್‌ಲೈನ್ ವಿಮರ್ಶೆಗಳಿಂದ, ಗಣ್ಯ ಸಾಹಿತಿಗಳ ಕೃತಿಯ ಕುರಿತ ಅಭಿಪ್ರಾಯಗಳಿಂದ ಬರಹಗಳನ್ನು ಜೀವಂತವಾಗಿರಿಸಲು ಮತ್ತು ಜನರು ಓದುವಂತೆ ಮಾಡಲು ಸಾಧ್ಯವಿಲ್ಲ. ಇವೆಲ್ಲ ದಿನನಿತ್ಯ ಪೇಟೆಯಲ್ಲಿ ಜನರನ್ನು ನೋಡಿದಂತೆ. ಎಂತಹ ಆಕರ್ಷಕ ಮುಖವೂ ನೆನಪಿನಲ್ಲಿ ದಾಖಲಾಗುವ ಮುನ್ನವೇ ಮರೆಗೆ ಸರಿದಿರುತ್ತದೆ. ಕೃತಿಯೊಂದರ ಉಳಿವು ಓದುಗನ ಕೈಯಲ್ಲಿ ಕೂಡ ಇಲ್ಲ. ಸ್ವತಃ ಕೃತಿಯೇ ತನ್ನ ಶಕ್ತಿಯಿಂದಾಗಿ ಉಳಿದುಕೊಳ್ಳಬೇಕಾಗುತ್ತದೆ. ಲೇಖಕರ ಆನ್‌ಲೈನ್ ಪ್ರಚಾರಗಳು ಮನುಷ್ಯನ ಅನೇಕ ನಿರರ್ಥಕ ಕೆಲಸಗಳ ಸಾಲಿಗೇ ಸೇರುತ್ತವೆ. ಯಾವುದೇ ಸಂವೇದನಾಶೀಲ ಬರಹಗಾರ ಈ ಕೆಲಸವನ್ನು ಮಾಡಲಾರ. ತಮ್ಮದೇ ಬರಹಗಳಿಂದ ಲೇಖಕರು ಮುಕ್ತರಾಗುವುದು ಅವರ ಮತ್ತು ಓದುಗರ ಮಾನಸಿಕ ಆರೋಗ್ಯದ ದೃಷ್ಟಿಯಿಂದ ಕೂಡ ಒಳ್ಳೆಯದು. ಇಲ್ಲದಿದ್ದರೆ ಭ್ರಮೆಯ ಜಗತ್ತಿನಲ್ಲಿ ಅಥವಾ ಸ್ವಮೋಹದ ಬಲೆಯಲ್ಲಿ ಹೊರಬರಲಾಗದಂತೆ ಅವರು ಸಿಲುಕುವುದು ನಿಶ್ಚಿತ. ಸ್ವಪ್ರದರ್ಶನಕ್ಕಿಂತ ಮೌನ ಅರ್ಥಪೂರ್ಣ ಎಂಬುದನ್ನು ಲೇಖಕರು ಅರಿಯುವಂತಾಗಬೇಕು.

**ಸಂದೀಪ ನಾಯಕ**